**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.1012/2023**

**ಪಿರ್ಯಾದುದಾರರು** ಃ ತರೀಕೆರೆ ಪೊಲೀಸ್

**-ವಿರುದ್ಧ-**

**ಆರೋಪಿ/ತರು** ಃ ಪ್ರವೀಣ

**-ಃದೋಷಾರೋಪಣೆಃ-**

**ಶ್ರೀ ವೈದ್ಯ ಶ್ರೀಕಾಂತ್,** ಬಿ.ಎಸ್ಸಿ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

ಪ್ರವೀಣ ಬಿನ್ ಮಲ್ಲಿಕಾರ್ಜುನ್, 30 ವರ್ಷ,
ಅಂಗಡಿ ವ್ಯಾಪಾರ, ವಾಸಃಬೆಟ್ಟದಹಳ್ಳಿ ಗ್ರಾಮ,
ತರೀಕೆರೆ ತಾಃ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ15.09.2022 ರಂದು ಸಂಜೆ 5-00 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ಬೆಟ್ಟದಹಳ್ಳಿ ಗ್ರಾಮದ ಆರೋಪಿಯಾದ ನೀವು ಕಾನೂನು ಬಾಹಿರವಾಗಿ ಯಾವುದೇ ಪರವಾನಗಿ ಇಲ್ಲದೇ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು ರೂ.1204.25/- ರ (1) ಒರಿಜಿನಲ್ ಚಾಯ್ಸ್ ವಿಸ್ಕಿ ಎಂದು ಬರೆದಿರುವ 90 ಎಂ ಎಲ್ 17 ಮದ್ಯ ತುಂಬಿರುವ ಪೌಚ್ ಗಳ ಮೇಲೆ ಬ್ಯಾಚ್ ನಂ.121, (2) ಓಲ್ಡ್ ಟವರಿನ್ ವಿಸ್ಕಿ ಎಂದು ಬರೆದಿರುವ 180 ಎಂ ಎಲ್ ನ 07 ಪೌಚ್ ಗಳಿದ್ದು, ಬ್ಯಾಚ್ ನಂ.32.12 ಇವುಗಳನ್ನು ಹೊಂದಿ, ಆ ಮೂಲಕ ನೀವು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಅದೇ ದಿನ, ಅದೇ ಸಮಯ, ಸ್ಥಳ ಹಾಗೂ ವಿಚಾರದಲ್ಲಿ ಆರೋಪಿಯಾದ ನೀವು (1) ಒರಿಜಿನಲ್ ಚಾಯ್ಸ್ ವಿಸ್ಕಿ ಎಂದು ಬರೆದಿರುವ 90 ಎಂ ಎಲ್ 17 ಮದ್ಯ ತುಂಬಿರುವ ಪೌಚ್ ಗಳ ಮೇಲೆ ಬ್ಯಾಚ್ ನಂ.121, (2) ಓಲ್ಡ್ ಟವರಿನ್ ವಿಸ್ಕಿ ಎಂದು ಬರೆದಿರುವ 180 ಎಂ

ಎಲ್ ನ 07 ಪೌಚ್ ಗಳಿದ್ದು, ಬ್ಯಾಚ್ ನಂ.32.12 ಇವುಗಳನ್ನು ಅಕ್ರಮವಾಗಿ ಇಟ್ಟುಕೊಂಡು ಲಾಭಕ್ಕಾಗಿ ಮಾರಾಟ ಮಾಡುತ್ತಿದ್ದು, ಆ ಮೂಲಕ ನೀವು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು (1) ಒರಿಜಿನಲ್ ಚಾಯ್ಸ್ ವಿಸ್ಕಿ ಎಂದು ಬರೆದಿರುವ 90 ಎಂ ಎಲ್ 17 ಮದ್ಯ ತುಂಬಿರುವ ಪೌಚ್ ಗಳ ಮೇಲೆ ಬ್ಯಾಚ್ ನಂ.121, (2) ಓಲ್ಡ್ ಟವರಿನ್ ವಿಸ್ಕಿ ಎಂದು ಬರೆದಿರುವ 180 ಎಂ ಎಲ್ ನ 07 ಪೌಚ್ ಗಳಿದ್ದು, ಬ್ಯಾಚ್ ನಂ.32.12 ಇವುಗಳು ಮಾನವನ ಆರೋಗ್ಯಕ್ಕೆ ಹಾನಿಕರವೆಂದು ಗೊತ್ತಿದ್ದರೂ ಕೂಡಾ ವಶದಲ್ಲಿಟ್ಟುಕೊಂಡು ಲಾಭಕ್ಕಾಗಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದು, ಆ ಮೂಲಕ ನೀವು **ಭಾ.ದಂ.ಸಂ. ಕಲಂ.273** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

Sd/-
**(ವೈದ್ಯ ಶ್ರೀಕಾಂತ್)**
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1)ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ

ಪ್ರಃ 2)ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉಃ

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)
ದಿನಾಂಕಃ

*Sd/-*
ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿ/ತರ ಸಹಿಃ